# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 311
2. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 06.03.2025
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ನಗರದಲ್ಲಿ ಮಾತ್ರೆಗಳನ್ನು ಮಾದಕ ವಸ್ತುಗಳಾಗಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ತುಮಕೂರು ನಗರದಲ್ಲಿ ಮಾತ್ರೆಗಳನ್ನು ಮಾದಕ ವಸ್ತುಗಳಾಗಿ ಮಾರಾಟ ಮಾಡುತ್ತಿರುವ ಕುರಿತು ಎರಡು ಪ್ರಕರಣಗಳು ವರದಿಯಾಗಿದ್ದು, ಸದರಿ ಎರಡು ಪ್ರಕರಣಗಳಲ್ಲಿ ಮೂರು ಜನ ಆರೋಪಿತರ ವಿರುದ್ಧ ಎರಡು ಎಫ್.ಐ.ಆರ್‌ಗಳನ್ನು ದಾಖಲಿಸಿಕೊಂಡು, ನಿಯಮನುಸಾರ ಕಾನೂನು ಕ್ರಮ ಕೈಗೊಳ್ಳಲಾಗಿರುತ್ತದೆ. |
| ಆ) | ಮಾತ್ರೆಗಳನ್ನು ಮಾದಕ ವಸ್ತುಗಳನ್ನಾಗಿ ಮಾರಾಟ ಮಾಡುತ್ತಿರುವ ಔಷಧಿ ಅಂಗಡಿ (ಮೆಡಿಕಲ್ ಸ್ಟೋರ್) ಮಾಲೀಕರ ಮೇಲೆ ಸರ್ಕಾರ ಕೈಗೊಂಡ/ಕೈಗೊಳ್ಳುವ ಕ್ರಮವೇನು; | ತುಮಕೂರು ಜಿಲ್ಲೆಯಲ್ಲಿ ಮಾತ್ರೆಗಳನ್ನು ಮಾದಕ ವಸ್ತುಗಳನ್ನಾಗಿ ಮಾರಾಟ ಮಾಡುತ್ತಿರುವ ಎರಡು ಔಷಧಿ ಅಂಗಡಿಗಳು (ಮೆಡಿಕಲ್ ಸ್ಟೋರ್) ಪತ್ತೆಯಾಗಿದ್ದು, ಸದರಿ ಔಷಧಿ ಅಂಗಡಿಯ ಮಾಲೀಕರ ಮೇಲೆ ಪ್ರಕರಣಗಳನ್ನು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿರುತ್ತದೆ.<br>ಸದರಿ ಎರಡು ಪ್ರಕರಣಗಳ ಪೂರ್ಣ ವಿವರಗಳನ್ನು **<u>ಅನುಬಂಧದಲ್ಲಿ</u>** ಒದಗಿಸಿದೆ. |
| ಇ) | ಕಳೆದ ಐದು ವರ್ಷಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಮಾದಕ ವಸ್ತುಗಳ ಮಾರಾಟದ ಮೇಲೆ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ; | ತುಮಕೂರು ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಮಾದಕ ವಸ್ತುಗಳ ಮಾರಾಟದ ಕುರಿತಾಗಿ ದಾಖಲಿಸಿರುವ ಪ್ರಕರಣಗಳು ಈ ಕೆಳಕಂಡಂತಿದೆ:- (see table below) |
| ಈ) | ಎಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿರುತ್ತದೆ; ಎಷ್ಟು ಪ್ರಕರಣಗಳಲ್ಲಿ ಎಷ್ಟು ಜನರನ್ನು ನಿರಪರಾಧಿಗಳೆಂದು ಪರಿಗಣಿಸಿ ಖುಲಾಸೆ ಮಾಡಲಾಗಿರುತ್ತದೆ; | ಮಾದಕ ವಸ್ತುಗಳ ಮಾರಾಟ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿರುವ ಮತ್ತು ಖುಲಾಸೆಯಾಗಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ:- (see table below) |

ಇ) ಉತ್ತರದ ಪಟ್ಟಿ:

| ವರ್ಷ | ಮಾದಕ ವಸ್ತುಗಳ ಮಾರಾಟ ಕುರಿತು ದಾಖಲಾಗಿರುವ ಪ್ರಕರಣಗಳ ಸಂಖ್ಯೆ |
|---|---|
| **2020** | 18 |
| **2021** | 21 |
| **2022** | 32 |
| **2023** | 30 |
| **2024** | 49 |
| **2025 (ಫೆಬ್ರವರಿ 28 ರವರೆಗೆ )** | 08 |

ಈ) ಉತ್ತರದ ಪಟ್ಟಿ:

| ವರ್ಷ | ವರದಿ | ಶಿಕ್ಷೆ | ಖುಲಾಸೆ |
|---|---|---|---|
| **2020** | 18 | 02 | 01 |
| **2021** | 21 | 01 | – |
| **2022** | 32 | 04 | – |
| **2023** | 30 | 02 | – |
| **2024** | 49 | 03 | – |
| **2025 (ಫೆಬ್ರವರಿ 28 ರವರೆಗೆ )** | 08 | 00 | – |

| | | |
|---|---|---|
| (ಉ) | ಮಾದಕ ವಸ್ತುಗಳ ಮಾರಾಟ ತಡೆಯಲು ಹಾಗೂ ಯುವ ಜನತೆ ಮಾದಕ ವಸ್ತುಗಳ ಚಟಕ್ಕೆ ಬೀಳದಂತೆ ಅವರಲ್ಲಿ ಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | **<u>ರಾಜ್ಯದಲ್ಲಿ ಮಾದಕ ವಸ್ತುಗಳ ಸಂಗ್ರಹಣೆ ಮತ್ತು ಸರಬರಾಜು ವಿರುದ್ಧ ಸರ್ಕಾರವು ತೆಗೆದು ಕೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ:-</u>**<br><br>➤ ಕಳೆದ 3 ವರ್ಷಗಳ ಅಂಕಿ-ಅಂಶಗಳಿಗೆ ಹೋಲಿಕೆ ಮಾಡಿದಲ್ಲಿ ಪ್ರಸಕ್ತ ಸಾಲಿನಲ್ಲಿ ಸುಮಾರು 2000 ಪ್ರಕರಣಗಳು ಕಡಿಮೆಯಾಗಿರುವುದು ಕಂಡುಬರುತ್ತದೆ.<br>➤ ಸುಮಾರು 7000 ಭಾರತೀಯರು ಮತ್ತು 150 ವಿದೇಶಿಯರನ್ನು NDPS ಕಾಯ್ದೆಯಡಿಯಲ್ಲಿ ಬಂಧಿಸಿ ತನಿಖೆ ಕೈಗೊಂಡು ಪ್ರಕರಣದ ವಿಲೇವಾರಿಗೆ ಶ್ರಮಿಸಲಾಗುತ್ತಿದೆ.<br>➤ NDPS-1985ರ ಕಾಯ್ದೆಯಡಿಯಲ್ಲಿ ದಾಖಲಾಗುವ ಪ್ರಕರಣಗಳನ್ನು ವಿಶೇಷವಾಗಿ ಮೇಲ್ವಿಚಾರಣೆ ಮಾಡಲು ಸಿಐಡಿ (CID) ಘಟಕದಲ್ಲಿ ಹೊಸದಾಗಿ "Director General of Police, Cyber Crime and Narcotics" ಹುದ್ದೆಯನ್ನು ಸೃಜಿಸಲಾಗಿದೆ.<br>➤ ಮಾದಕದ್ರವ್ಯ ಸೇವನೆ, ಮಾರಾಟ, ಸಂಗ್ರಹಣೆ ಮತ್ತು ಸರಬರಾಜು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ಸಲುವಾಗಿ ಸಿಐಡಿ ಘಟಕದಲ್ಲಿ ವಿಶೇಷ ತರಬೇತಿ ನೀಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈಗಾಗಲೇ ರಾಜ್ಯದಲ್ಲಿ 167 ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.<br>➤ ಮಾದಕ ವಸ್ತುಗಳ ಬಳಕೆಯನ್ನು ನಿಯಂತ್ರಿಸುವ ಸಲುವಾಗಿ ವಿಶೇಷ ತರಬೇತಿ ಕಾರ್ಯಗಾರ ನಡೆಸಿ 2023ನೇ ಸಾಲಿನ ಡಿಸೆಂಬರ್ ಮಾಹೆಯಲ್ಲಿ 2409 ಶಾಲಾ ಕಾಲೇಜುಗಳಲ್ಲಿ ಒಟ್ಟು 3,95,253 ಹಾಗೂ 2024ನೇ ಸಾಲಿನ ಜೂನ್ ಮಾಹೆಯಲ್ಲಿ 3602 ಶಾಲಾ, ಕಾಲೇಜುಗಳಲ್ಲಿ 5.50 ಲಕ್ಷ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ತಿಳುವಳಿಕೆ ನೀಡಲಾಗಿದೆ.<br>➤ ಇದಲ್ಲದೇ, ಜೂನ್ 26, 2024 ರಂದು "ಡ್ರಗ್ ದುರುಪಯೋಗ ಮತ್ತು ಅಕ್ರಮ ಸಾಗಣಿಕೆ ವಿರುದ್ಧ ಅಂತರ ರಾಷ್ಟ್ರೀಯ ದಿನಾಚರಣೆ" ಅಂಗವಾಗಿ ಸುಮಾರು 4,000 ಶಾಲಾ, ಕಾಲೇಜು ವಿಧ್ಯಾರ್ಥಿಗಳಿಗೆ ತರಬೇತಿ ಕಾರ್ಯಗಾರ ನಡೆಸಿ ತಿಳುವಳಿಕೆ ನೀಡಲಾಗಿದೆ.<br>➤ Drugs Free Karnataka Mobile Appಅನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಲ್ಲಿ ಹಾಗೂ ವಿಧ್ಯಾರ್ಥಿಗಳಲ್ಲಿ ಅರಿವು ಮೂಡಿಸಿ ಮಾದಕವಸ್ತು ಬಳಕೆ, ಸಂಗ್ರಹಣೆ ಸರಬರಾಜು ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದಿಟ್ಟ ಕ್ರಮ ಕೈಗೊಳ್ಳಲಾಗುತ್ತಿದೆ.<br>➤ ಅಕ್ರಮ ಮಾದಕ ವ್ಯಸನವನ್ನು ಪತ್ತೆಹಚ್ಚಲು ಮತ್ತು ನಿರ್ಮೂಲನೆ ಮಾಡಲು ರಾಜ್ಯಾದ್ಯಂತ ಪೊಲೀಸ್ ಸಿಬ್ಬಂದಿಗಳಿಗೆ NCB (Narcotics Control Bureau) Online ತರಬೇತಿ ಕಾರ್ಯಕ್ರಮಗಳ ಮುಖಾಂತರ ತರಬೇತಿ ನೀಡಲಾಗುತ್ತಿದೆ. ಈ ಉದ್ದೇಶಕ್ಕಾಗಿ NCB Mobile Application/Web Portal (MAPDRUGS) ಸಹ ಪರಿಚಯಿಸಲಾಗುತ್ತಿದೆ. |

| | | |
|---|---|---|
| | | ➢ ಮುಂದುವರೆದು, ಭೋಪಾಲ್‌ನಲ್ಲಿರುವ Central Academy of Police Training (CAPT) ನಲ್ಲಿ ತರಬೇತುದಾರರಿಗಾಗಿ ತರಬೇತಿ (TOT) ಹಾಗೂ ಮಾದಕ ದ್ರವ್ಯ ತನಿಖೆಯ ಮೇಲೆ ಕೇಂದ್ರೀಕರಿಸಿದ ಕಾರ್ಯಕ್ರಮಗಳಿಗೆ ಈಗಾಗಲೇ ಸಿಐಡಿಯಿಂದ ಅಧಿಕಾರಿಗಳನ್ನು ಕಳುಹಿಸಿಕೊಡಲಾಗಿದೆ.<br>➢ NDPS ಕಾಯ್ದೆ–1985 ಕುರಿತು ಪೊಲೀಸ್ ತರಬೇತಿ ಶಾಲೆಗಳಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಹಾಗೂ ಪೊಲೀಸ್ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಈಗಾಗಲೇ NCB ಮತ್ತು ಇತರ ಏಜೆನ್ಸಿಗಳ ಸಹಯೋಗದೊಂದಿಗೆ 6 ಕಾರ್ಯಾಗಾರಗಳನ್ನು ಆಯೋಜಿಸಿದ್ದು, ಪೊಲೀಸ್ ಉಪಾಧೀಕ್ಷಕರು, ಪೊಲೀಸ್ ನಿರೀಕ್ಷಕರು ಮತ್ತು ಮತ್ತು ಅಬಕಾರಿ ಅಧಿಕಾರಿಗಳಿಗೂ ಸಹ ವಿಶೇಷ ತರಬೇತಿಯನ್ನು ನೀಡಲಾಗಿದೆ.<br>➢ ಬಸ್, ರೈಲ್ವೇ ಮತ್ತು ಮೆಟ್ರೋ ನಿಲ್ದಾಣಗಳು ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಅನುಮಾನಸ್ಪದ ವಸ್ತುಗಳು ಕಂಡಬಂದಲ್ಲಿ ಶ್ವಾನ ದಳದ ಮುಖಾಂತರ ಮಾದಕ ವಸ್ತು ಪತ್ತೆ ಮತ್ತು ಸ್ಫೋಟಕ ವಸ್ತುಗಳನ್ನು ಪತ್ತೆ ಹಚ್ಚುವ ಕಾರ್ಯಾಚರಣೆಗಳಲ್ಲಿ ಬಳಸಲಾಗುತ್ತಿದೆ.<br>➢ ನಾರ್ಕೋಟಿಕ್ ಕಂಟ್ರೋಲ್ ಬ್ಯೂರೋ ಕಾರ್ಯವ್ಯಾಪ್ತಿಯಲ್ಲಿ National Integrated Database on Arrested Narco Offenders (NIDAAN) & Seizer Information Management System (SIMS) ಪೋರ್ಟಲ್‌ಗಳನ್ನು ಸ್ಥಾಪಿಸಿದ್ದು, ಸದರಿ ಪೋರ್ಟಲ್‌ಗಳಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆ–1985ರ ಅಡಿಯಲ್ಲಿ ದಾಖಲಾಗುವ ಪ್ರಕರಣಗಳಲ್ಲಿನ ಆರೋಪಿಗಳ ವಿವರಗಳನ್ನು NIDAAN ಹಾಗೂ ಜಪ್ತಿ ಪಡಿಸಿಕೊಂಡಿರುವ ಮಾದಕ ವಸ್ತುಗಳ ಮಾಹಿತಿಯನ್ನು SIMS ಪೋರ್ಟಲ್‌ಗಳಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ.<br>➢ ಸದರಿ ಪೋರ್ಟಲ್‌ಗಳಿಂದ ರಾಷ್ಟ್ರಾದ್ಯಾಂತ ಬಂಧಿಸಲಾಗಿರುವ ಆರೋಪಿಗಳ ಮತ್ತು ಜಪ್ತಿ ಪಡಿಸಿಕೊಂಡ ಮಾದಕ ವಸ್ತುಗಳ ಮಾಹಿತಿಯು ಲಭ್ಯವಾಗಿರುತ್ತದೆ. |

ಒಇ 6 ಪಿಎನ್‌ಡಿ 2025(ಇ)

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

<u>ಅನುಬಂಧ</u>

## ತುಮಕೂರು ಜಿಲ್ಲೆಯಲ್ಲಿ ಮಾತ್ರೆಗಳನ್ನು ಮಾದಕ ವಸ್ತುಗಳನ್ನಾಗಿ ಮಾರಾಟ ಮಾಡುತ್ತಿರುವ ಔಷಧಿ ಅಂಗಡಿಗಳ ವಿರುದ್ದ ದಾಖಲಿಸಿರುವ ಪ್ರಕರಣಗಳ ವಿವರಗಳು:

| ಕ್ರ ಸಂ. | ಪೊಲೀಸ್ ಠಾಣೆ ಹೆಸರು, ಮೊ.ಸಂ. ಮತ್ತು ಕಲಂ | ಔಷಧಿ ಮಾರಾಟ ಮಳಿಗೆಯ ವಿವರಗಳು | ವಶಪಡಿಸಿ ಕೊಂಡಂತಹ ಮಾದಕ ದ್ರವ್ಯಗಳ ವಿವರ | ಆರೋಪಿತರ ಬಂಧಿತರ ವಿವರಗಳು | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|
| 1 | ತುಮಕೂರು (ಗ್ರಾ) ಠಾಣಾ ಮೊ.ನಂ. 293/23 ಕಲಂ 276 ಐಪಿಸಿ 17(ಬಿ), 18(ಎ), 27 ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಆಕ್ಟ್ ಮತ್ತು ಕಲಂ 26 ಎನ್.ಡಿ.ಪಿ.ಎಸ್. ಕಾಯ್ದೆ. | ಶ್ರೀನಿವಾಸ ಮೆಡಿಕಲ್ ಸ್ಟೋರ್, ಹೆಗ್ಗರೆ, ತುಮಕೂರು | Tapentadol 25 Tablets (100 Mg) | ಚೇತನ್ ಬಿನ್ ಚಂದ್ರಪ್ಪ, 29 ವರ್ಷ, ವಕ್ಕೋಡಿ ರೋಡ್, ಹೆಗ್ಗರೆ, ತುಮಕೂರು | ಆರೋಪಿಗೆ ಘನ ನ್ಯಾಯಾಲಯವು ರೂ 2,500/– ದಂಡ ವಿಧಿಸಿರುತ್ತದೆ. |
| 2 | ತಿಲಕ್‌ಪಾರ್ಕ್ ಮೊ.ನಂ.111/24 ಕಲಂ:26 ಎನ್.ಡಿ.ಪಿ.ಎಸ್. ಕಾಯ್ದೆ ಮತ್ತು ಕಲಂ 278 ಬಿ.ಎನ್.ಎಸ್. | ಎ.ಎನ್ ಮೆಡಿಕಲ್ ಸ್ಟೋರ್, ದಾನಾ ಪ್ಯಾಲೇಸ್ ಹತ್ತಿರ, ಮೇಲುಕೋಟೆ, ತುಮಕೂರು | Tapentadol 1670 Tablets & Aspadol 50 Tablets | 1) ಅಬ್ದುಲ್ ಖಾದರ್ ಬಿನ್ ಅಸಾದುಲ್ಲಾ, 23 ವರ್ಷ, ಎಎನ್ ಮೆಡಿಕಲ್ ಸ್ಟೋರ್, ಮೆಳೇಕೋಟೆ, ತುಮಕೂರು. 2) ಬೀರೇಶ ಬಿನ್ ಹೊನ್ನರಾಜು, 20ವರ್ಷ, ಸಿದ್ದರೂಡಮಠ ರೋಡ್, ಅಮರಜ್ಯೋತಿ ನಗರ, ತುಮಕೂರು. | ದಿ:19/02/25 ರಂದು ದೋಷಾರೋಪಣ ಪತ್ರವನ್ನು ತಯಾರಿಸಿದ್ದು, ಮೇಲಾಧಿಕಾರಿಗಳ ಪರಿಶೀಲನೆಗೆ ಸಲ್ಲಿಸ ಬೇಕಾಗಿರುತ್ತದೆ. |